ಸಿ.ಸಿ .ನಂ.165/2022 ಪಿಡಬ್ಲ್ಯೂ: 1

ದಿನಾಂಕಃ 30-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

3. ಆರೋಪಿಗೆ ಸಾಲವನ್ನು ಕೊಟ್ಟಿದರೆ ಆರೋಪಿಯ ವಾಸ್ತವ್ಯ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೂಲ ವಿಳಾಸ ಅಂಕೋಲಾ ತಾಲೂಕು ಎಂದರೆ ಸರಿ . ನಮ್ಮ ಬ್ಯಾಂಕಿನ ಇನ್ನೊಂದು ಶಾಖೆ ಅಂಕೋಲಾದಲ್ಲಿದೆ ಎಂದರೆ ಸರಿಯಲ್ಲ . ಸಾಕ್ಷಿ ಗೋಕರ್ಣದಲ್ಲಿದೆ ಎಂದು ನುಡಿದಿರುತ್ತಾರೆ. ಆರೋಪಿ ಮನೆಯ ಅಭಿವೃದ್ಧಿಗೆ ಸಾಲವನ್ನು ಪಡೆದುಕೊಂಡಿರುತ್ತಾರೆ . ಮನೆಯ ಅಭಿವೃದ್ಧಿ ಬಗ್ಗೆ ಅವರಿಂದ ದಾಖಲಾತಿ ಪಡೆದುಕೊಂಡಿದ್ದೇವೆ . ಈ ಪ್ರಕರಣದಲ್ಲಿ ಆರೋಪಿ ಸಾಲ ತೆಗೆದುಕೊಂಡ ಬಗ್ಗೆ ಹಾಗೂ ನಾವು ಅವರಿಗೆ ಸಾಲವನ್ನು ಕೊಟ್ಟ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಸಾಲದ ಅರ್ಜಿ , ಸಾಲದ ಕರಾರು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಚೆಕ್ ಕೇಸಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ . ಚೆಕ್ ಕೇಸಿಗೆ ಸಂಬಂಧಪಟ್ಟಂತೆ ಚೆಕ್ , ಅಂಚೆ ರಸೀದಿ ಹಾಜರು ಪಡಿಸಿದ್ದೇವೆ . ಫಿರ್ಯಾದಿನಲ್ಲಿ ಹೇಳಿದಂತೆ ಮೊರ್ಟಗೇಜಿಗೆ ಸಂಬಂಧಪಟ್ಟಂತೆ ದಾಖಲಾತಿ ಹಾಜರು ಪಡಿಸಿದ್ದೇವೆ . ಸಾಕ್ಷಿಗೆ ಕೇಸಿನ ಕಡತವನ್ನು ನೀಡಲಾಗಿ ಕೇಸಿನ ಕಡತವನ್ನು ನೋಡಿ ಸಾಕ್ಷಿ ನಿಪಿ -7 ಲೆಡ್ಜರ ಎಕ್ಸ್ಟ್ರಾಕ್ಟ ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ. ಫಿರ್ಯಾದಿನಲ್ಲಿ ಹೇಳಿದಂತೆ ಮೊರ್ಟಗೇಜ್ ಲೋನ್ ಖಾತೆ ನಂ. 3 ಕ್ಕೆ ಸಂಬಂಧಪಟ್ಟಂತೆ ಲೆಡ್ಜರ್ ಶೀಟ್ ಬಿಟ್ಟು ಬೇರೆ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಲೆಡ್ಜರ ಶೀಟ್ ನಲ್ಲೇ ಎಲ್ಲಾ ಮಾಹಿತಿ ಇದೆ ಎಂದು ನುಡಿದಿರುತ್ತಾರೆ . ನಿಪಿ-7 ರಲ್ಲಿ ಯಾವ ದಿನಾಂಕದಂದು ಯಾವ ಆಸ್ತಿಯನ್ನು ಮೊರ್ಟಗೇಜ್ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇಲ್ಲ ಆದರೆ ನಿಪಿ -7 ಚೆಕ್ ಕೇಸಿಗೆ ಸಂಬಂಧಪಟ್ಟಿದೆ . ನಾವು ನಮ್ಮ ಫಿರ್ಯಾದಿನಲ್ಲಿ ಬರೆದುಕೊಂಡಂತಹ ಮೊರ್ಟಗೇಜ್ ಲೋನ್ ಯಾವ ಆಸ್ತಿಗೆ ಸಂಬಂದಪಟ್ಟಂತೆ ಬರೆದುಕೊಂಡಿದ್ದೇವೆ ನೆನಪಿಲ್ಲ . ನಾವು ಸಾಲವನ್ನು ಮನೆಯ ಅಭಿವೃದ್ಧಿಗೆ ನೀಡಿರುತ್ತೇವೆ .

ಪಿಡಬ್ಲೂಃ 1

ಆ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ . ಅವು ಬ್ಯಾಂಕಿನಲ್ಲಿವೆ . ಆ ದಾಖಲಾತಿಗಳನ್ನು ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನ್ಯಾಯಾಲಯದಿಂದ ತರಿಸಿಕೊಳ್ಳಬಹುದು ಎಂದು ನುಡಿದಿರುತ್ತಾರೆ . ಆರೋಪಿ ಏನು ಉದ್ಯೋಗ ಮಾಡುತ್ತಿದ್ದರು ಹಾಗೂ ಅವರಿಗೆ ಎಷ್ಟು ಆದಾಯ ಇತ್ತು ಆ ಬಗ್ಗೆ ಮಾಹಿತಿ ಪಡೆದಿದ್ದೇವೆ . ಮೊರ್ಟಗೇಜ್ ಡೀಡ್ ಹಾಜರು ಪಡಿಸಲು ತೊಂದರೆ ಇಲ್ಲ. ಮೊರ್ಟಗೇಜ್ ಲೋನ್ ಆದ ದಾಖಲಾತಿ ಅತೀ ಮುಖ್ಯ ದಾಖಲಾತಿ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.